# ಸುಗ್ರಾಮ

# ಸುಗ್ರಾಮ

15-6-2016

# ಸುಗ್ರಾಮ

ಕರ್ನಾಟಕ ಸರ್ಕಾರ

**ತಾಲ್ಲೂಕು ಆರೋಗ್ಯಾಧಿಕಾರಿಗಳ ಕಛೇರಿ**

ಸಾರ್ವಜನಿಕ ಆಸ್ಪತ್ರೆ ಆವರಣ. ಗೌರಿಬಿದನೂರು.

ಇಮೇಲ್–thogbnr@yahoo.com. ದೂರವಾಣಿ–08155–285333

ಸಂಖ್ಯೆ:ತಾಆಅಗೌ/ 01 /2015–16 ದಿನಾಂಕ:01.04.2016

ರವರಿಗೆ,

ತಾಲ್ಲೂಕಿನ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ
ಆಡಳಿತ ವೈದ್ಯಾಧಿಕಾರಿಗಳಿಗೆ ,

ಮಾನ್ಯರೇ,

ವಿಷಯ : ಪ್ರಾಥಮಿಕ ಆರೋಗ್ಯ ಕೇಂದ್ರ/ ಸರ್ಕಾರಿ ಆಸ್ಪತ್ರೆಗಳಲ್ಲಿರುವ ಅವ್ಯವಸ್ಥೆಗಳನ್ನು ಸರಿಪಡಿಸುವ ಬಗ್ಗೆ.
ಉಲ್ಲೇಖ: ಸುಗ್ರಾಮ/ ಗ್ರಾ.ಪಂ ಚುನಾಯಿತಿ ಮಹಿಳಾ ಪ್ರತಿನಿಧಿಗಳ ಸಂಘ ರವರ ದಿ:19–03–16 ಮನವಿಯಂತೆ.

***************

ಮೇಲ್ಕಂಡ ವಿಷಯ ಉಲ್ಲೇಖಕ್ಕೆ ಸಂಬಂಧಿಸಿದಂತೆ ದಿನಾಂಕ: 19/03/16 ರಂದು ಗ್ರಾಮ ಪಂಚಾಯತ್ ಚುನಾಯಿತ ಮಹಿಳಾ ಪ್ರತಿ ನಿಧಿಗಳ ಸಂಘ ಗೌರಿಬಿದನೂರಿನಲ್ಲಿ ಏರ್ಪಡಿಸಿದ್ದು, ಸಭೆಯಲ್ಲಿ ಪ್ರಾ.ಆ.ಕೇಂದ್ರಗಳಲ್ಲಿ ಅನೇಕ ಸಮಸ್ಯೆಗಳು ಇದ್ದು ಅವುಗಳನ್ನು ಬಗೆಹರಿಸಬೇಕೆಂದು ಬೇಡಿಕೆ ಇಟ್ಟಿರುತ್ತಾರೆ, ಬೇಡಿಕೆಗಳು ಈ ಕೆಳಕಂಡಂತಿದ್ದು ಇವುಗಳನ್ನು ಬಗೆಹರಿಸಲು ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದೆ.

1.ಗ್ರಾಮ ಆರೋಗ್ಯ ನೈರ್ಮಲ್ಯ ಸಮಿತಿಗಳನ್ನು ಅಪ್‌ಡೇಟ್ ಮಾಡುವುದು ಸಭೆಗಳನ್ನು ಕಡ್ಡಾಯವಾಗಿ ನಡೆಸುವಂತೆ ಆಶಾ ಕಾರ್ಯಕರ್ತೆಯರಿಗೆ ಸೂಚಿಸುವುದು.

2.ಆರೋಗ್ಯ ಉಪಕೇಂದ್ರ ಕಟ್ಟಡಗಳು, ವಸತಿ ಗೃಹಗಳು ಇರುವ ಕಡೆ, ವೈದ್ಯರು, ಆರೋಗ್ಯ ಸಹಾಯಕಿಯರು ಕೇಂದ್ರ ಸ್ಥಾನದಲ್ಲಿ ವಾಸವಾಗಿರುವ ಕಟ್ಟಡಗಳ ಸುಸ್ಥಿತಿಯನ್ನು ಕಾಪಾಡುವುದು.

3.ಮೇಳ್ಯ, ಪುರ, ಮುದುಗೆರೆ, ಹುದುಗೂರು, ಬೈಚಾಪುರ, ಕಡಬೂರು ಉಪಕೇಂದ್ರಗಳಲ್ಲಿ ಆರೋಗ್ಯ ಸಹಾಯಕಿಯರು ಇರುವ ಉಪಕೇಂದ್ರ ಕಟ್ಟಡಗಳಲ್ಲಿ ಇದ್ದು ಕೆಲಸ ನಿರ್ವಹಿಸುವುದು.

4.ಶಿಥಿಲಾವಸ್ಥೆಯಲ್ಲಿರುವ ಉಪಕೇಂದ್ರಗಳ ವಸತಿ ಗೃಹಗಳ ಪಟ್ಟಿ ತಯಾರಿಸಿ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಛೇರಿ ನೀಡುವುದು.

5.ಸರ್ಕಾರಿ ಆಸ್ಪತ್ರೆಗಳಲ್ಲಿ ಪಾರದರ್ಶಕತೆಯನ್ನು ಕಾಪಾಡುವುದು ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ಸೇವಾ ಸೌಲಭ್ಯಗಳನ್ನು ಒದಗಿಸುವುದು.

6.ಗ್ರಾಮ ಆರೋಗ್ಯ ನೈರ್ಮಲ್ಯ ಸಮಿತಿಯಲ್ಲಿ ಗ್ರಾಮ ಪಂಚಾಯಿತಿ ಚುನಾಯಿತ ಮಹಿಳಾ ಸದಸ್ಯರಿಗೆ ಆದ್ಯತೆ ನೀಡುವಂತೆ ಕೋರಿರುತ್ತಾರೆ.

ಮೇಲ್ಕಂಡ ಎಲ್ಲಾ ಕ್ರಮಗಳನ್ನು ಕೈಗೊಂಡು ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಕರ್ತವ್ಯ ನಿರ್ವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ.

Rathna...

ತಾಲ್ಲೂಕು ಆರೋಗ್ಯಾಧಿಕಾರಿಗಳು
ಗೌರಿಬಿದನೂರು.

ಪ್ರತಿಯನ್ನು,

1.ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿಕ್ಕಬಳ್ಳಾಪುರ ರವರ ಮಾಹಿತಿಗಾಗಿ ಸಲ್ಲಿಸಿದೆ.

2.ಅಧ್ಯಕ್ಷರು, ಸುಗ್ರಾಮ ಗ್ರಾಮ ಪಂಚಾಯತ್ ಮಹಿಳಾ ಪ್ರತಿನಿಧಿಗಳ ಸಂಘ, ಕರ್ನಾಟಕ ಬೆಂಗಳೂರು ರವರ ಮಾಹಿತಿಗಾಗಿ.

Post
16/04/16